ಮೈಸೂರ ಗೆಜೆಟ್.

ನಂ. 10 ಸರ್ಕಾರದಿಂದ ಪಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಮಾರ್ಚೀ ತಾ|| 12, ಸ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಪಟ್ರೋಲರವರು, ಪಬ್ಲಿಕ್ ವರ್ಕ್‌ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್‌ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬೂರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ- ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ಫಿಬ್ರವರೀ 1887.

ನಂ. 233.—ಸ್ 1884ನೇ ಇಸವಿ ಡಿಶಂಬರ್ 12ನೇ ಮತ್ತು೦ 187ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪಾಯಿಷ್ಮಾಡಲ್ಪಟ್ಟ, ಅಡ್ವೊಕೇಟ್ ವ ಪ್ಲೀಡರುಗಳಾಗಿ ದಾಖಲ್ಮಾಡಿಕೊಳ್ಳುವದಕ್ಕೋಸ್ಕರ ಅವರುಗಳ ಯೋಗ್ಯತೆ ವಗೈರೆ ವಿಷಯಿಕವಾದ ನಿಬಂಧನೆಗಳ ಇದರಡೀ ಕಂಡ ತಿದ್ದುಪಾಟುಗಳು, ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಸದರೀ ನಿಬಂಧನೆಗಳ IVನೇ ನಿಬಂಧನೆಗೆ ಇದರಡೀ ಬರುವದನ್ನು ಶೇರಿಸತಕ್ಕದ್ದು—

"ಯರಡನೇ ಗ್ರೇಡ್ ಪ್ಲೀಡರುಗಳ ವಿಷಯದಲ್ಲಿ, ಅಂಥಾವರು ಐದು ವರುಷಗಳಿಗಿಂತ ಕಮ್ಮಿ ಇಲ್ಲದ ಕಾಲಪರಿಯಂತ ಪ್ಲೀಡರು ಕೆಲಸ ಜರಗಿಸುತ್ತಾ ಇದ್ದು ಅವರು ಕೆಲಸ ಜರಗಿಸಿದಂಥಾ ಕೋರ್ಟು ಯಾ ಕೋರ್ಟುಗಳ ಜಡ್ಜಿ ಯಾ ಜಡ್ಜೀರುಗಳಿಂದ ಬಾಹುಷಿ ಸರಟಿ ಫಿಕೇಟ್ ಹಾಜರ್ಮಾಡಿದಲ್ಲಿ ಅಂಥವರ ವಿಷಯದಲ್ಲಿ VIನೇ ನಿಬಂಧನೆಯಿಂದ ವಿಧಿಸಲ್ಪಟ್ಟ ವಿದ್ಯಾ ವಿಷಯಿಕವಾದ ಯೋಗ್ಯತೆ ಯಿಲ್ಲದೆಯೇ ಅವರ ಅಪೇಕ್ಷಾನುಸಾರ ಇಂಗ್ಲೀಷ್ ಯಾ ಕನ್ನಡ ಭಾಷೆಯಲ್ಲಿ ಸದರೀ ಪರೀಕ್ಷೆ ತೆಗದುಕೊಳ್ಳತಕ್ಕದ್ದು."

"ಮೇಲ್ಕಂಡ ರಿಯಾಯಿತಿಯು, 1887 ಮತ್ತು 1888ನೇ ಇಸವಿಗಳಲ್ಲಿ ನಡಿಸಲ್ಪಡುವ ಪರೀಕ್ಷೆಗಳಿಗೆ ಮಾತ್ರ ಲಗಾವಾಗತಕ್ಕದ್ದು."

ತಾರೀಖು 11ನೇ ಫಿಬ್ರವರೀ 1887.

ನಂ. 244.—1874ನೇ ಇಸವಿ ಆಗಸ್ಟ್ 31ನೇ ಮರ್ಕುಂ 153ನೇ ನಂಬರ್‌ವುಳ್ಳ ಮೈಸೂರು ಚೀಫ್ ಕಮ್ಮಿಷನರರವರಿಂದ ಸಾದ ರ್ಮಾಡಲ್ಪಟ್ಟ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಯಿದರಡೀಕಂಡ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ 1878ನೇ ಇಸವಿಯ ಫಾರೆಸ್ಟು ರೂಲ್ಸ್ ಪ್ರಕಾರ ಪ್ರಕಟಿಸಲ್ಪಟ್ಟಿರುತ್ತೆ.

ಕೆಲವು ಕೆಲಸಗಳಿಗೋಸ್ಕರ ಬಗರ್ ರುಸುಂ ಮರ ವ ಬೊಂಬುಗಳನ್ನು ಕಪಾಯಿಸಿಕೊಳ್ಳುವ ಬಗ್ಯೆ ರೈತರುಗಳಿಗೆ ಕೊಡಲ್ಪಟ್ಟ ಹಕ್ಕುದಾರಿಯು, ಈಮೆಯ ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ದುರುಪಯೋಗ ಪಡಿಸಲ್ಪಟ್ಟಂತೆ ಶ್ರೀಮ್ ಮಹಾರಾಜಾ ಸರ್ಕಾರದವರ ಜಾಹಿರಾತಿಗೆ ಬಂದಿರುವದರಿಂದ ಸದರೀ ಸರ್ಕಾರದವರು ಇದರ ದೆಶೆಯಿಂದ ಹುಕ್ಕುಂ ಮಾಡುವದೇನಂದರೆ, ಐಯಿಂದ—

1. ತನ್ನ ಜವಿನಾನುಗಳಿಗೋಸ್ಕರ ಸರಕಾರಕ್ಕೆ ಜವಿರ್ ಕಂದಾಯವನ್ನು ಪೆರತಕ್ಕಂಥಾ ವಬ್ಬ ರೈತನು ದನದ ಕೊಟ್ಟಿಗೆಗಳಿಗೋಸ್ಕರ ಮರವೆನ್ನು ಅಪೇಕ್ಷಿಸಿದರೆ, ಅವನು ಇದಕ್ಕೆ ಶೇರಿಸಿರುವ ನಮೊನೆಯಲ್ಲಿ ತಾನು ವಾಸವಾಗಿರುವ ತಾಲ್ಲೂಕು ಅಮಲ್ದಾರರಲ್ಲಿ ಪ್ರಥಮತಃ ದರಖಾಸ್ತು ಕೊಡತಕ್ಕದ್ದು, ಸದರೀ ದರಖಾಸ್ತು ಡಿಟೋ ದರಖಾಸ್ತುದಾರ ವಾಸವಾಗಿರುವ ಗ್ರಾಮದ ಶ್ಯಾನುಭೋಗ ವ ಗೌಡನಿಂದ ರುಜುಮಾಡಲ್ಪಡತಕ್ಕದ್ದು.

2. ತರುವಾಯ ಅಮಲ್ದಾರರು, ವಾಸ್ತವ್ಯವಾಗಿ ಬೇಕಾಗಿರುವ ಮನ್ನಾ ಜಾತಿ ಅಲ್ಲದ ಮರ ವ ಬೊಂಬುಗಳ ತೇದಾದನ್ನು ಅಂದಾಜ್ ಮಾಡಿ (ಅಂಥಾ ಅಂದಾಜಿನ ಮೌಲ್ಯವು ದರಖಾಸ್ತುದಾರನು ಶಾವತೀ ಮಾಡತಕ್ಕ ವಂದು ಸಾಲಿನ ಕಂದಾಯಕ್ಕೆ ಜಾಸ್ತೀಯಾಗಿರ ಕೂಡದು) ಮಾಫಿ ರಹದಾರಿ ಕೊಡಲ್ಪಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರಿಗಾಗಲೀ ಈ ಬಗ್ಯಾಗಿ ಸದರೀಯವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರಿಗಾಗಲೀ ಸಿಫಾರಸ್ ಮಾಡತಕ್ಕದ್ದು. ಸದರೀ ಮಾಫಿ ರಹದಾರಿಯು ಕೊಡಲ್ಪಟ್ಟರೆ ಅದು ಇದರಡೀಕಂಡ ನಮೊನೆಯಲ್ಲಿರ ತಕ್ಕದ್ದು.

3. ಅಂಥಾ ಮಾಫೀ ರಹದಾರಿಯನ್ನು ಉಂಟಾಗಿರುವ ಮನುಷ್ಯನು ಮರವನ್ನು ಕತರಾಯಿಸಿ ಭಂಡೀ ಮೂಲಕ ಸಾಗಿಸುವ ಬಗ್ಯೆ ಆಧಾರವಾದ ಸದರೀ ಪ್ಯಾಸನ್ನು ಯಾವದಾದರೂ ಪೋಲೀಸ್ ಯಾ ಫಾರೆಸ್ಟು ಆಫೀಸರಿಂದ ಅಪೇಕ್ಷಿಸಲ್ಪಟ್ಟಾಗ ಹಾಜರ್ಮಾಡತಕ್ಕದ್ದು. ಅವನು ತನಿಗೆ ಕೊಟ್ಟಿರುವ ವಾಯಿದೆವಳಗಾಗಿ ಮರ ಕಡಿದು ತನ್ನ ಗ್ರಾಮಕ್ಕೆ ಸಾಗಿಸಬೇಕು. ಗ್ರಾಮದ ಗೌಡನು ಸಾಗಿಸಲ್ಪಟ್ಟಿರುವ ಮರ ವ ಬೊಂಬುಗಳನ್ನು ಅಪ್ಪಣೆ ಕೊಡಲ್ಪಟ್ಟ ತೇದಾದಿನೊಂದಿಗೆ ಮೊಕ್ತಾಬಿಲೆ ಮಾಡಿ, ಸದರೀ ಮಾಫೀ ರಹದಾರಿಯನ್ನು ಅವನ ವಶದಿಂದ ತೆಗದುಕೊಂಡು ಪರಾ ಮಾಡಿ ತಾಲ್ಲೂಕು ಅಮಲ್ದಾರರಲ್ಲಿಗೆ ರವಾನಿಸತಕ್ಕದ್ದು. ಅವರು ಅದನ್ನು ಡೆಪ್ಯುಟಿ ಕಮ್ಮಿಷನರಿಗೆ ರವಾನಿಸಬೇಕು. ಮರ ಮತ್ತು ಬೊಂಬುಗಳು ವಾಸ್ತವ್ಯವಾಗಿ ಅವಶ್ಯಕವಿದ್ದಾಗ ಮಾತ್ರವೇ ಮಾಫೀಯಾಗಿ ಕೊಡಲ್ಪಡುವದು, ಮತ್ತು ರೈತನ ಸಾಲಿಯಾನಾ ಕಂದಾಯದ ಮೌಲ್ಯದಷ್ಟು ಮಟ್ಟಿಗೆ ಸಾಲೀಯಾನಾ ಕೊಡತಕ್ಕದ್ದಲ್ಲವು.

4. ಜನಗಳ ಪ್ರವೇಶಕ್ಕೆ ಬಂದು ಮಾಡುವದು ಅವಶ್ಯಕವೆಂದು ಕಾಣಬಂದಿರುವ ಅಡವಿಯೊಳಗೆ ಮನ್ನಾ ಜಾತಿ ಅಲ್ಲದ ಮರ ಮತ್ತು ಬೊಂಬುಗಳನ್ನು ಕತರಾಯಿಸುವ ಬಗ್ಯೆ ರಹದಾರೀ ಕೊಡಲ್ಪಟ್ಟರೆ, ಸದರೀ ರಹದಾರಿಯನ್ನು ಪಡೆದಿರುವ ಮನುಷ್ಯನು ಅಮಲ್ದಾರರ ಮುಖಾಂತ್ರ ವಾಪಸ್ ಮಾಡಿ, ಪ್ರವೇಶಕ್ಕೆ ಖಿಲ್ಲಾ ಯಿರತಕ್ಕ ಅಡವಿಯಲ್ಲಿ ಮರ ಕತರಾಯಿಸುವ ಬಗ್ಯೆ ರಹದಾರೀ ಪಡೆಯತಕ್ಕದ್ದು.

5. ಫಾರೆಸ್ಟ್ ರೂಲ್ಸ್‌ಗಳ ಸಾಧಾರಣ ಜಲಾವಣಿಯಿಂದ ವಿನಾಯಿಸಲ್ಪಟ್ಟ ತಾಲ್ಲೂಕುಗಳಲ್ಲಿ ರೈತರುಗಳಿಗೆ ವಾಸಮಾಡುವ ಮನೆ ಮತ್ತು ದನಗಳ ಕೊಟ್ಟಿಗೆಗಳು ಕಟ್ಟುವ ಬಗ್ಯೆ ಮನ್ನಾ ಜಾತಿ ಅಲ್ಲದ ಮರಗಳು ಮತ್ತು ಬೊಂಬುಗಳು ಬೇಕಾಗಿರುವ ಪಕ್ಷದಲ್ಲಿ ಅವರು ಸಿಫಾರಸ್ ಪಡೆದು ದನದ ಕೊಟ್ಟಿಗೆಗಳು ಕಟ್ಟುವ ಬಗ್ಯೆ ಮರ ಮತ್ತು ಬೊಂಬುಗಳನ್ನು ಪಡೆಯುವದಕ್ಕಾಗಿ ವಿಧಿಸಲ್ಪಟ್ಟ ಪದ್ಧತಿಯಂತೆಯೇ ರಹದಾರಿಗಳನ್ನು ಹೊಂದತಕ್ಕದ್ದು.

6. ಯಾವ ರೈತನಾಗಲಿ ಕ್ರಮವಾಗಿ ಮಾಫಿ ರಹದಾರಿಯನ್ನು ಪಡಿಯದೆ ತನ್ನ ದನದ ಕೊಟ್ಟಿಗೆಗಳಿಗೋಸ್ಕರ ಅಥವಾ ವಿನಾಯಿಸಲ್ಪಟ್ಟ ತಾಲ್ಲೂಕುಗಳಲ್ಲಿ ತನ್ನ ಮನೆಗೋಸ್ಕರವಾದರೂ ಕೊಟ್ಟಿಗೆ ಗೋಸ್ಕರವಾದರೂ ಮರ ಯಾ ಬೊಂಬುಗಳನ್ನು ಕತರಾಯಿಸಿರುವದಾಗಿ ತಪ್ಪು ಹೊರಿಸಲ್ಪಟ್ಟರೂ ಅಥವಾ ವಾಯಿದೆ ಮೀರಿ ಹೋದ ರಹದಾರಿಯನ್ನು ವಾಪಸ್ ಮಾಡದೆ ಯಿದ್ದರೂ ಯಾ ಅವನಿಗೆ ಅಪ್ಪಣೆ ಕೊಡಲ್ಪಟ್ಟ ತೇದಾದನ್ನು ಮೀರಿದಾಗ್ಯೂ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸಿನ 40ನೇ ಸೆಕ್ಷನಿನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದು.

7. ರೈತರುಗಳಿಗೆ ಜೀಸಾಯದ ಕೆಲಸಗಳಿಗೋಸ್ಕರ ಮನ್ನಾ ಜಾತಿ ಅಲ್ಲದ ಮರ ಮ ಬೊಂಬುಗಳನ್ನು ತೆಗದುಕೊಳ್ಳುವ ಬಗ್ಯೆ ಉಂಟುಮಾಡಲ್ಪಟ್ಟ ಹಕ್ಕುದಾರಿಯು ಅವರುಗಳಿಂದ ದುರುಪಯೋಗಪಡಿಸಲ್ಪಡದೆ ಇರುವ ಬಗ್ಯೆ ಅಮಲ್ದಾರರು ಜವಾಬ್ದಾರರಾಗಿರತಕ್ಕದ್ದು. ತಮಾಂ ಅಮಲ್ದಾರುಗಳೂ, 1874ನೇ ಇಸವಿ ಏಪ್ರಿಲ್ 25ನೇ ಮರ್ಕುಂ 633—51ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಪ್ರೊಸಿಡಿಂಗ್ಸ್‌ಗೂ ಮತ್ತು ಫಾರೆಸ್ಟು ರೂಲ್ಸಿನಲ್ಲಿ ಉಪಯೋಗಿಸಲ್ಪಟ್ಟಂತೆ "ರೈತ" ಸೆಂಬ ಬ್ದದ ಅರ್ಥವನ್ನು ವಿವರಿಸುವಂಥಾ ಮತ್ತು ವಿನಾಯಿಸಲ್ಪಟ್ಟ ತಾಲ್ಲೂಕುಗಳಿಗೆ ಫಾರೆಸ್ಟು ರೂಲ್ಸ್‌ಗಳ ಸಾಧಾರಣ ಜಲಾವಣಿಯು ಎಷ್ಟು ಮಟ್ಟಿಗೆ ಲಗಾವಾಗುವದಿಲ್ಲವೋ ಅದನ್ನು ವಿವರಿಸುವಂಥಾ 1873ನೇ ಇಸವಿ ಏಪ್ರಿಲ್ 23ನೇ ಮರ್ಕುಂ ವುಳ್ಳ 5ನೇ ನಂಬರ್ ಇಸ್ತಿಹಾರ್‌ನಾಮೆಗೂ ಸುದಾ ನಿಗೇ ಕೊಡತಕ್ಕದ್ದು.

8. ಮೇಲೆ ಕಂಡ ಹಕ್ಕುದಾರಿಗಳು, ಗ್ರಾಮ ಫಾರೆಸ್ಟುಗಳು ವಿರ್ಮಾಡು ಮಾಡಲ್ಪಡುವ ಅಥವಾ ಫಾರೆಸ್ಟುಗಳ ಕ್ರಮವಾದ ಸಂರಕ್ಷಣೆಗೆ ಅನುಗುಣವಾದ ಯಾವದಾದರೂ ವಟ್ಟು ನಡವಳಿತಗಳು ವಿರ್ಮಾಡು ಮಾಡಲ್ಪಡುವ ಪರಿಯಂತವೇ ಹಂಗಾಮಿಯಾಗಿ ಪುಟು

ಮಾಡಲ್ಪಟ್ಟಂತೆ ತಿಳಿಯತಕ್ಕದ್ದು, ಈ ಶೀಮೆಗೆ ಸರ್ವೆ ಮತ್ತು ಸೆಟಲ್‌ಮೆಂಟ್ ಜಾರಿಗೆ ತರಲ್ಪಟ್ಟ ಲಾಗಾಯತು ರೈತರುಗಳಿಗೆ ಅವರ ಜಮ್ಮಿಗಳಲ್ಲಿ ಬೆಳೆಯುವ ಮರಗಳ ವಿಷಯದಲ್ಲಿ ಹೇರಳವಾದ ರಿಯಾಯತಿಯು ಉಂಟುಮಾಡಲ್ಪಟ್ಟಿರುವದರಿಂದ, ಈ ರೂಲ್ಸ್ ಅನುಸಾರವಾದ ರಿಯಾಯತಿಯು ಮೌತಾದ್ ಆಗಿರತಕ್ಕದ್ದು.

ದನದ ಕೊಟ್ಟಿಗೆಗೋಸ್ಕರ ಜೇಕಾದ ಮನ್ನಾ ಜಾತಿ ಅಲ್ಲದ ಮರ ಮತ್ತು ಜೊಂಬುಗಳಿಗಾಗಿ ಅಮಲ್‌ದಾರರಿಗೆ ಕೊಡುವ ದರಖಾಸ್ತಿನ ನಮೂನೆ:—

೧ ರೈತನ ಹೆಸರು, ಹೋಬ್ಳಿ ಗ್ರಾಮದ ಹೆಸರು.	ಅವನು ತೆರುವ ಕಂದಾಯದ ಜೊಬಲಗು.	ಅವನಲ್ಲಿರುವ ದನಗಳ ಸಂಖ್ಯೆ.	ಮರ ಮತ್ತು ಜೊಂಬುಗಳು ಅಪೇಕ್ಷಿತ ವರ್ಷಗಳಿಗೆ ಯಾವಾಗ ಕೊಡಲ್ಪಟ್ಟಿತ್ತು.	ಹೀಗೆ ಆವಶ್ಯಕವಾಗಿರುವ ೨ ಮತ್ತು ಜೊಂಬುಗಳ ಶೇಷ.	ಕಾರ್ಯ.	ಅಮಲ್‌ದಾರರ ಸಿಫಾರಸು.

ಮನ್ನಾ ಜಾತಿ ಅಲ್ಲದ ಮರ ಮತ್ತು ಜೊಂಬುಗಳಿಗೋಸ್ಕರ ರೈತರಿಗೆ ಕೊಡಲ್ಪಡುವ ಮಾಫಿ ರಹದಾರಿ ನಮೂನೆ:—

ತಾಲ್ಲೂಕು.	ರಹದಾರಿ ಪಡೆದವನ ಹೆಸರು, ಹೋಬ್ಳಿ ಮತ್ತು ಗ್ರಾಮ.	ಕಂದಾಯಸಲ್ಲತಕ್ಕಂಥ ೨ ದಗಳ ವಿವರ.	ಯಾವ ಕೆಲಸದ ಒಸ್ಕೆ ಕೊಡಲ್ಪಟ್ಟಿತು.	ಭಂಡಿ ಜೋಡಿ ಪ್ರಕಾರ ತೋಡು.	ಸದರೀ ಸೂದೂನು ಕತರಾಯಿಸಿ ಸಲ್ಲಬೇಕಾದ ಪ್ರದೇಶ.	ರಹದಾರಿಯು ನಾಪಸು ನಷ್ಟಡ ಲ್ಪತಕ್ಕಂಥ ತಾರೀಖು.	ಅದು ನಾಪಸ ನೆಡಲ್ಪಟ್ಟ ತಾರೀಖು.

ಮೊಕ್ಕಾಂ,
ತಾರೀಖು

ಡೆಪ್ಯೂಟಿ ಕಮ್ಮಿಷನರ್ ಯಾ
ಫಾರೆಸ್ಟ್ ಆಫೀಸರ್.

ತಾರೀಖು 10ನೇ ಫಿಬ್ರವರೀ 1887.

ನಂ. 245.—1886ನೇ ಇಸವಿ ಡಿಸಂಬರ್ 22ನೇ ಮಕ್ಕಂ 1461ನೇ ನಂಬರ್ ಇಸ್ತಿಹಾರ್‌ನಾಮೆಯ 2ನೇ ಪ್ಯಾರಾ ಅನುಸರಿಸಿ ಮೈಸೂರು ಶೀಮೆಯಲ್ಲಿ ಜಮ್ಮಿ ಪಡೆಯುವದಕ್ಕೆ ಗವರ್ನಮೆಂಟಿನ ಮಂಜೂರಾತಿಗೋಸ್ಕರ ದರಖಾಸ್ತು ಕಳುಹಿಸುವ ಆಫೀಸರುಗಳು, ಅವರ ದರಖಾಸ್ತಿನೊಂದಿಗೆ ಇದರಡೀ ಕಂಡ ತಪಶೀಲ್‌ಗಳು ಅಡಗಿರುವ ಒಂದು ತಖ್ತೆಯನ್ನು ಕಳುಹಿಸತಕ್ಕದ್ದು.

1. ದರಖಾಸ್ತು ಮಾಡುವ ಆಫೀಸರರ ಹೆಸರು ಮತ್ತು ಉದ್ಯೋಗದ ಹೆಸರು.
2. ಪಡೆಯುವದಕ್ಕೆ ಉದ್ದೇಶಿಸಲ್ಪಟ್ಟ ಜಮ್ಮಿ ಇರತಕ್ಕ ತಾಲ್ಲೂಕು ಮತ್ತು ಗ್ರಾಮದ ಹೆಸರು.
3. ತರೀಯೇ ಖುಷ್ಕಿಯೇ ಅಥವಾ ಬಾಗಾಯತೇ.
4. ಸರ್ಕಾರ್ ಅಥವಾ ಇನಾಮೆ.
5. ಬೀಜವರಿ, ವ ಕಂದಾಯವೇನಾದರೂ ಇದ್ದರೆ ಅದು.
6. ಖರೀದಿ ಮೂಲಕವೇ ಆಧಾರದ ಮೂಲಕವೇ ದಾನ ವಗೈರೆ ಮೂಲಕವಾಗಿಯೇ ಯೆಂಬ ತಪಶೀಲು.
7. ಪ್ರತಿಫಲವೇನಾದರೂ ಇದ್ದರೆ ಅದು.